doc-26
T-P-2

Regd No. M 1229 | 43rd Year | Sri 'Satyavadi' Mysore | 4—4—1959

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಂಸ್ಥೇದಾರ್ ಎ. ಏ ಸುಬ್ಬರಾಯುರು [ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಟಿಬೆಟ್‌ನ ದಲಾಯಿ ಲಾಮಾರಿಗೆ ಭಾರತದಲ್ಲಿ ಆಶ್ರಯ

ಭಾರತದಲ್ಲಿರುವ ಪಾಕಿಸ್ತಾನಿಗಳು

ನವದೆಹಲಿ 3— ಭಾರತದಲ್ಲಿ 1958 ರ ನವೆಂಬರ್ 1 ರಂದು ಸರಿಯಾದ ರಹದಾರಿ ಪತ್ರಗಳಿಲ್ಲದೆ ಅಥವಾ ತಮ್ಮ 'ವೀಸಾ'ಗಳ ಅವಧಿ ಮುಗಿದ ಮೇಲೆ ಸುಮಾರು 64000 ಮಂದಿ ಪಾಕಿಸ್ತಾನಿ ನಾಗರಿಕರಿದ್ದರು ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಸುಳ್ಳು ನುಡಿ

ಜಮ್ಮು 3— ಬೆಗರ ಅಬ್ದುಲಾ ತಮ್ಮ ಸಂಸಾರಕ್ಕೆ 5 ಡಿಸೆಂಬರ ನಂತರ ಅಲೋಯನ್ನು ಪಾಸಪತಿಯಾಗುತ್ತಿಲ್ಲವೆಂದು ಹೇಳಿರುವದು ಸುಳ್ಳೆಂದೂ, ಅಕೆಯು ಜಮ್ಮು ಮತ್ತು ಕಾಶ್ಮೀರ ಬ್ಯಾಂಕು ಮೂಲಕ ಮಾಸಿಕ 500 ರೂಪಾಯಿಗಳನ್ನು ಪ್ರತಿ ತಿಂಗಳೂ ತಪ್ಪದೆ ಪಡೆಯುತ್ತಿರುವರೆಂದು ಚೀಫ್ ಸೆಕ್ರೆಟರಿಯವರು ಪತ್ರಕರ್ತರಿಗೆ ತಿಳಿಸಿದರು.

ಹೊಡೆದಾಟ

ಕೋಲಾರ 1— ಇಲ್ಲಿ ಸುಮಾರು ಹಾಲ್ಕು ವೈಲಿ ದೂರದಲ್ಲಿರುವ ಬೆಸ್ತರಪಳ್ಳಿಯಲ್ಲಿ ಎರಡು ವಿಭಿನ್ನ ಪಕ್ಷಗಳಿಗೆ ಹೊಡೆದಾಟವಾಗಿ, 8 ಮಂದಿ ಗಾಯಗೊಂಡರು.

ಭಾಷಿತೀಯರ ಅಪಹರಣ

ಕೊಲ್ಕತ್ತ 3— ಜಲಪೈಗುರಿ ಜಿಲ್ಲೆಯ ರಾಜಗಂಜ್ ಪೋಲೀಸು ಸ್ಟೇಷನ್ನಿನ ಹತ್ತಿರದ ಗಡಿ ಗ್ರಾಮದಲ್ಲಿ ಪಿಕಾರಿಗಾಗಿ ಹೋಗಿದ್ದ ಇಬ್ಬರು ಭಾರತೀಯರನ್ನು ಪೂರ್ವಪಾಕಿಸ್ತಾನದ ಶಸಸ್ತ್ರ ಪೋಲೀಸರು ಎಳೆದುಕೊಂಡುಹೋದರು.

ವಾಷಿಂಗ್ಟನ್ 3— ಅಮೇರಿಕಾದಿಂದ ಪಾಕಿಸ್ತಾನಕ್ಕೆ ಜೆಟ್ ವಿಮಾನ ಮಾರಾಟ ಯೋಜನೆಯಿಲ್ಲವೆಂದು ಅಮೇರಿಕಾ ಸರಕಾರ ಈ ದಿನ ದೆಹಲಿಗೆ ತಿಳಿಸಿದೆ.

ನವ ದೆಹಲಿ 3— ಭಾರತದಲ್ಲಿ ದಲಾಯಿ ಲಾಮಾರಿಗೆ ಆಶ್ರಯ ಕೊಡಬೇಕೆಂದು ಭಾರತ ಸರ್ಕಾರ ನಿರ್ಧರಿಸಿರುವ ಅಂಶವನ್ನು ಈ ಮಧ್ಯಾಹ್ನ ಇಲ್ಲಿನ ಚೀನಾ ರಾಯಭಾರಿಗೆ ತಿಳಿಸಲಾಯಿತು. ದಲಾಯಿ ಲಾಮಾ ಭಾರತಕ್ಕೆ ಬಂದ ಬಗ್ಗೆ ಲೋಕಸಭೆಯಲ್ಲಿ ಪಂ॥ ನೆಹರು ಭಾಷಣ ಮಾಡಿದ ಪ್ರತಿಯನ್ನು ವಿದೇಶ ಕಾರ್ಯದರ್ಶಿ ಶ್ರೀ ಎಸ್. ದತ್ ಚೀನಾ ರಾಯಭಾರಿಗೆ ಕೊಟ್ಟರೆಂದು ಗೊತ್ತಾಗಿದೆ. ಚೀನಾ ಮನವಿ ಮಾಡಿಕೊಂಡರೂ, ದಲಾಯಿ ಲಾಮಾರಿಗೆ ಯಾವುದೇ ಸಂದರ್ಭದಲ್ಲೂ ಚೀನಾಕ್ಕೆ ಒಪ್ಪಿಸುವದಿಲ್ಲವೆಂದು ಗೊತ್ತಾಗಿದೆ. ಭೂತಾನ್ ಮತ್ತು ಸಿಕ್ಕಿಂ ಸರ್ಕಾರಗಳು ಭಾರತ ಸರ್ಕಾರಕ್ಕೆ ಲಾಮಾರಿಗೆ ಕ್ಷೇಮ ಮತ್ತು ಭವಿಷ್ಯದ ಬಗ್ಗೆ ಅತಂಕ ವ್ಯಕ್ತ ಪಡಿಸಿದೆ.

ವಿಧಾನಸೌಧ ವರದಿ ಪ್ರಕಟಣೆ ಪರಿಶೀಲನೆ

ಬೆಂಗಳೂರು 3— ಗೋವರ್ಧನ ಪೀಠದಲ್ಲಿ ಇದುವರೆಗೆ 40 ಸೂಚನೆಗಳು ಸರ್ಕಾರಕ್ಕೆ ಒಪ್ಪಿತವಾಗಿವೆ ಎಂದು ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ವಿಧಾನಸಭೆಯಲ್ಲಿ ತಿಳಿಸಿದರು. ವಿಧಾನಸೌಧ ವಿಚಾರಣೆ ಸಮಿತಿ ವರದಿ ಪ್ರಕಟಣೆ ಮಾಡುವ ಅಂಶ ಸರ್ಕಾರಿ ಪರಿಶೀಲನೆಯಲ್ಲಿದೆ ಎಂದು ಅವರು ತಿಳಿಸಿದರು.

ಖಾ॥ ಅಬ್ದುಲ್ ಗಫಾರ್ ಖಾ॥ ಬಿಡುಗಡೆ

ಕರಾಚಿ 4 — ಖಾ॥ ಅಬ್ದುಲ್ ಗಫಾರ್ ಖಾ॥ರ ಬಂಧನವಿಮೋಚನೆ ಮಾಡುವ ನಿರ್ಧಾರವನ್ನು ಪಾಕಿಸ್ತಾನ ಸರಕಾರ ಈ ದಿನ ದೆಳಿಗ್ಗೆ ಕೈಗೊಂಡಿದೆ.

ಅಭಿವೃದ್ಧಿ ಸಮಿತಿ ತೀರ್ಮಾನ

ನವ ದೆಹಲಿ 3 — ಆಯಾಯ ಪ್ರಾಂತಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಧಾನ್ಯಗಳ ಚಿಲ್ಲರೆ ವಾರಾಟಗಳ ಬೆಲೆಯನ್ನು ನಿಗದಿ ಮಾಡುವಂತೆ ರಾಷ್ಟ್ರೀಯ ಅಭಿವೃದ್ಧಿ ಸಮಿತಿ ನಿರ್ಧರಿಸಿದೆ.

ಅಕ್ಷಯಪಾತ್ರೆ ಕರೆ

ಪೂರಿ 3 — ಸಂಸ್ಕೃತ ಭಾಷೆಯ ಅಭ್ಯಾಸಕ್ಕೆ ಜನರು ತಮ್ಮ ಶಕ್ತಿ ವಿನಿಯೋಗ ಮಾಡಬೇಕೆಂದು ಭಾರತ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ಕರೆ ಇತ್ತಿದ್ದಾರೆ.

ಮನವಿ

ನವ ದೆಹಲಿ 3 — ಆಹಾರ ನೀತಿ ಬಗ್ಗೆ ತಮ್ಮತಮ್ಮಲ್ಲೇ ದಕ್ಷಿಣ ಸಂಸ್ಥಾನಗಳು ದ್ವಿಮುಖ ವ್ಯವಸ್ಥೆಗಾಗಿ ಸಂಯುಕ್ತ ಯೋಜನೆಯೊಂದನ್ನು ತಯಾರಿಸಲು ಕೋರಲಾಗಿದೆ.

ಪಾಕ್ ಆರೋಪ

ಕರಾಚಿ 3 — ಭಾರತ ಮತ್ತು ಅಫ್ಘಾನಿಸ್ತಾನದ ಗಡಿಯಲ್ಲಿ ಬುಡಮೇಲು ಚಳುವಳಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ಸೀಟೋ ಸಮ್ಮೇಳನದಲ್ಲಿ ಪಾಕಿಸ್ತಾನ ಚರ್ಚೆ ಎತ್ತುವದಾಗಿ ಗೊತ್ತಾಗಿದೆ.

ಅಂದಾಜಪಟ್ಟಿಯ ಸಾಮಾನ್ಯ ಚರ್ಚೆ

ಮೈಸೂರು 3 — ಶ್ರೀ ಬಿ ಎಚ್. ಕೆಂಗೇಗೌಡರ ಅಧ್ಯಕ್ಷತೆಯಲ್ಲಿ ಈ ದಿನ ಮಧ್ಯಾಹ್ನ ಸೇರಿದ್ದ ಮೈಸೂರು ನಗರ ಸಭೆಯ ಅಂದಾಜಪಟ್ಟಿ ಅಧಿವೇಶನದಲ್ಲಿ ಮುಂದಿನ ಸಾಲಿನ ಅಂದಾಜಿನ ಬಗ್ಗೆ ಸಾಮಾನ್ಯ ಚರ್ಚೆ ನಡೆಯಿತು.

ಪೌರಸಭೆ

ಮೈಸೂರು ಪೌರಸಭೆಯ ಮುಂದುವರಿದ ಅಂದಾಜಪಟ್ಟಿ ಅಧಿವೇಶನ ಈ ತಿಂಗಳು 11 ನೇ ತಾ॥ ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುವದು.

ಮೈಸೂರು ಪೌರಸಭೆಯ ಮುಂದುವರಿದ ಸಾಮಾನ್ಯ ಸಭೆ 8 ನೇ ತಾ॥ ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುವದು.

ನಿರೋಧ ದಿನ

ಶ್ರೀ ಕೆ ಕರ್ಣ್ಣರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಚಿಕ್ಕಲಾಲ್ಬಾಗಿನಲ್ಲಿ ಬುಧವಾರ ಬೆಲೆ ಏರಿಕೆ ನಿರೋಧ ದಿನವನ್ನು ಹಿಂದ್ ಮಜದೂರ ಸಭೆ ಆಚರಿಸಿತು.

ಸಂತೋಷ

ಲಂಡನ್ 3 — ದಲಾಯಿ ಲಾಮಾ ಕ್ಷೇಮವಾಗಿರುವದನ್ನು ಕೇಳಿ ಬ್ರಿಟೀಷು ವಿದೇಶಾಂಗ ಕಚೇರಿಯ ಪ್ರಮುಖನು ಹರ್ಷ ವ್ಯಕ್ತಪಡಿಸಿರುವನು.

ತಿರಸ್ಕರಣ

ನವ ದೆಹಲಿ 3 — ಮಕ್ಕಳ ಸನ್ಯಾಸ ಮಸೂದೆಯನ್ನು ಲೋಕಸಭೆ ತಿರಸ್ಕರಿಸಿತು.

ಕಾಂಗ್ರೆಸಿಗೆ ಬಹುಮತ

ಖಟಮಂಡು 3 — ನೇಪಾಳ ರಾಜ್ಯಭಾರ ಮಾಡುವ ಬಹುಮತ ನೇಪಾಳದ ಕಾಂಗ್ರೆಸಿಗೆ ಸಿಕ್ಕಿದೆ.

ನಾಳೆಯ ಪಂಚಾಂಗ

ಅ॥ ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣಜೋಯಿಸರಿಂದ

5 ತ್ರಯೋದಶಿ ಶತಭಿಷ

ಜಗತ್ಪ್ರಸಿದ್ಧ 'ಕೋನಾರ್ಕ' ದೇವಾಲಯದ ಸಂರಕ್ಷಣೆ

ವಿಶ್ವವಿಖ್ಯಾತ ಕೋನಾರ್ಕ ದೇವಾಲಯಕ್ಕೆ ಕಳೆದ ಎರಡು ವರ್ಷಗಳಿಂದ ಭಾರತ ಸಂಕಲ್ಪದ ಪ್ರಾಚ್ಯವಸ್ತು ಸಂಶೋಧನ ವಿಭಾಗದವರು ವಿಶೇಷ ಗಮನ ವಿತ್ತಿರುವರು — ಬಂಗಾಳಕೊಲ್ಲಿಗೆ ಕೆಲವು ಮೈಲಿಗಳ ದೂರದಲ್ಲಿ ಭುವನೇಶ್ವರಕ್ಕೆ ಆಗ್ನೇಯಕ್ಕೆ 31 ಮೈಲಿಗಳ ದೂರದಲ್ಲಿಯೂ ಇರುವ ಕೋನಾರ್ಕನಲ್ಲಿ ಈ ಬೃಹತ್ಪ್ರಮಾಣದ ದೇವಾಲಯವಿದೆಯುವುದು — ಈ ದೇವಾಲಯ ಸೂರ್ಯದೇವಸ್ಥಾನ ; ಇದು 24 ಚಕ್ರಗಳುಳ್ಳ 7 ಕುದುರೆಗಳಿಂದ ಎಳೆಯಲ್ಪಡುವ ರಥದ ರೀತಿಯಲ್ಲಿ ನಿರ್ಮಾಣಗೊಂಡಿದೆ ; ಕೋನಾರ್ಕ ಎಂದರೆ 'ಕೋಸದಲ್ಲಿರುವ ಸೂರ್ಯ' ಎಂಬ ಈ ಸ್ಥಳದ ಹೆಸರು ಸ್ಪಷ್ಟಪಡಿಸುತ್ತದೆ — ಆ ಕ್ಷೇತ್ರದ ಅಸ್ಥಾನದಲ್ಲಿದಲ್ಲಿದ್ದ ಇತಿಹಾಸಶಾಸ್ತ್ರಜ್ಞ ಅಬುಲ್ ಫಜಲ್ ಈ ದೇವಾಲಯವನ್ನು 'ಸುಲಭ ತೃಪ್ತರಲ್ಲದವಾಸ್ತು ಶಿಲ್ಪಿಕಲಾ ಪರಿಣತಿಯೂ ಸಹ ಈ ದೇವಾಲಯವನ್ನು ನೋಡಿದಾಗ ದಿಗ್ಭ್ರಮೆಗೊಳ್ಳದವರಿಲ್ಲ' ಎಂದು ವರ್ಣಿಸಿರುವನು — ಈ ದೇವಾಲಯವನ್ನು 13 ನೆಯ ಶತಮಾನದಲ್ಲಿ ಒರಿಸ್ಸಾದ ಗಂಗವಂಶದ ದೊರೆಗಳು ಕಟ್ಟಿಸಿದರು — ಈ ದೇವಾಲಯದ ಎತ್ತರ 200 ಅಡಿಗಳಿಗೂ ಹೆಚ್ಚು ಇರುವುದು — ನವಗ್ರಹಗಳನ್ನು ಚಿತ್ರಿಸಿರುವ ಶಿಲೆಯ ವೇದಿಕೆಯು 19 ಅಡಿ 9 ಅಂಗುಲ ಉದ್ದವೂ 4 ಅಡಿ ಎತ್ತರವೂ 3 ಅಡಿ 9 ಅಂಗುಲ ಆಳವೂ ಉಳ್ಳ ಶಿಲೆಯಾಗಿರುವುದು — ದೌರ್ಭಾಗ್ಯವಶಾತ್, ಈ ದೇವಾಲಯದ ಶಿಖರವು ಯಾವುದೇ ಸಮಯದಲ್ಲಿ ಬಿದ್ದುಹೋಗಿದೆ — ಸರ್ಕಾರದವರು ಇಲ್ಲೊಂದು ವಸ್ತು ಸಂಗ್ರಹಾಲಯ ಸ್ಥಾಪಿಸಲು ಅನುಮತಿ ನೀಡಿರುವರು ; ಅಲ್ಲಿನ ಎಲ್ಲಾ ಭಗ್ನ ಮೂರ್ತಿಗಳನ್ನೂ ಇದರಲ್ಲಿ ಇಡಲಾಗುವುದು.

ಭಾರತದ ನಾಟಕಗಳನ್ನು ಕುರಿತು

ನ್ಯೂಯಾರ್ಕ್ 31— ಭಾರತದ ಸಾಹಿತ್ಯದಲ್ಲಿ ಪ್ರಭುತ್ವ ಸಂಪಾದಿಸಿರುವ ಇಬ್ಬರು ವಿದ್ವಾಂಸರಿಂದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಶುಕ್ರವಾರ ಪ್ರಾಚೀನ ಭಾರತದ ನಾಟಕವನ್ನು ಕುರಿತ ಸಚಿತ್ರ ಉಪನ್ಯಾಸವನ್ನು ಏರ್ಪಡಿಸಲಾಗಿತ್ತೆ — ಫೆಬ್ರವರಿ 10 ರವರೆಗೂ ನಡೆಯಲಿರುವ ಈ ಪ್ರದರ್ಶನವನ್ನು ಭಾರತದ ನಾಟಕಕ್ಕೆ ಇರುವ ಪಾಶ್ಚಾತ್ಯರ ಆಸಕ್ತಿಗೆ ಅನುಗುಣವಾಗಿ ಏರ್ಪಡಿಸಲಾಗಿದೆ, ಎಂಬ ಒದಾಕಿ ಡಾಲ್ಟ್ ವೆಲ್ಸ್ ತಿಳಿಸಿದ್ದಾರೆ ; ಸುಮಾರು 700 ಚಿತ್ರಗಳು, ಅನೇಕ ಮುಖವಾಡಗಳು, ಸೂತ್ರದ ಬೊಂಬೆಗಳೂ ರಂಗೋಪಕರಣಗಳೂ ಈ ಪ್ರದರ್ಶನದಲ್ಲಿವೆ — ಸಂಸ್ಕೃತ ಯುಗದ ಸುಮಾರು 60 ನಾಟಕಗಳು ಉಳಿದುಬಂದಿವೆ ; ಇವುಗಳೆಲ್ಲಾ ಬಹುವಾಗಿ ಕ್ರಿ ಶ 4 ನೇ ಶತಮಾನದಿಂದ 9 ನೇ ಶತಮಾನಗಳವರೆಗೆ ರಚಿತವಾದವು — ಅವೇಂಕಾದ ನಾಗರೀಕರೂ, ಸಂಸ್ಥೆಗಳೂ ಮತ್ತು ಭಾರತದ ಕಾನ್ಸಲೇಟಿನವರೂ ಒದಗಿಸಿದ ವಸ್ತುಗಳ ಸಹಾಯದಿಂದ ಈ ಪ್ರದರ್ಶನವನ್ನು ಏರ್ಪಡಿಸಲಾಗಿದೆ

ಪ್ರಶಸ್ತಿ

ಮೈಸೂರಿನಲ್ಲಿ ತಾ|| 28–3–59 ರಲ್ಲಿ ನಡೆದ ಶ್ರೀ ರೇಣುಕ ಜಯಂತಿ ಮಹೋತ್ಸವ ಸಂದರ್ಭದಲ್ಲಿ, ಶ್ರಿ ಗೌಂವ್ಮ ನಾಗರಾಜ್ರವರಿಗೆ 'ಗಮಕಕಲಾ ಪ್ರವೀಣೆ' ಎಂಬ ಪ್ರಶಸ್ತಿಯೂ, ಶ್ರೀ ಎಂ ಜೆ ನಂಜುಂಡಾರಾಧ್ಯರಿಗೆ 'ವ್ಯಾಖ್ಯಾನ ವಿಚಕ್ಷಣ' ಎಂಬ ಪ್ರಶಸ್ತಿಯೂ, ಅರ್ಹವಾದ ಬಿಲ್ಲಕ್ಕುಗಳೊಡನೆ ಕೊಡಲಾಯಿತು.

ಗೋರಕ್ಷಣ, ಪಶುಪಾಲನೆಯಲ್ಲಿ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಜೀವಿಲಿಗರಾಗಿರಿ

ಗೋರಕ್ಷಣೆ, ಪಶುಪಾಲನೆಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಪೋಷಕರು ರೂ 25, ಜೀವಿಲಿಗರು ರೂ 10 (ಒಂದೇ ಸಾರಿ)

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Our Bangalore Sales Depot address—
71/4 Arcot Sreenivasachar St., Bangalore 2.

ವುಡ್‌ಲಾಂಡ್ಸ್ ತಾ. 3–4–59 ನೇ ಶುಕ್ರವಾರದಿಂದ

ಯುಲ್. ಬಿ ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ– ನೂತನ್ ರಾಜ್ ಕಪೂರ್ ಮೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ

ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ ಈ ಚಿತ್ರವನ್ನು ನೋಡಲು ಮರೆಯಬೇಡಿ

[ದಿನವಹಿ 3 ಪ್ರದರ್ಶನಗಳು]

ಅಪೆರಾ— 3–4–59 ರಿಂದ

ಸಕಲರೂ ನೋಡಬೇಕಾದ ಮಹೋನ್ನತ ಪೌರಾಣಿಕ ಚಿತ್ರ

ಶ್ರೀ ತುಳಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗಿರಿಜಾ

ಪ್ರತಿದಿನ 3 ಆಟಗಳು

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕ ಫಾರ್ಮಸಿ

ಅಲ್ಬಾನ್ಸ್‌ಡಾ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nilaya M S Krishna Rao, at the Satyavadi Press Chamarajapuram, Mysore.